## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1220
ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ
ಉತ್ತರಿಸುವ ಸಚಿವರು :ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ :17.12.2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಚಿಕ್ಕಮಗಳೂರು ಘಟಕದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲೆಂದರಲ್ಲಿ ಬಸ್‌ಗಳು ಕೆಟ್ಟು ನಿಲ್ಲುತ್ತಿರುವುದರಿಂದ ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ತಾಂತ್ರಿಕ ದೋಷಗಳಿಂದ ಕೆಲವು ಬಸ್‌ಗಳು ಕೆಟ್ಟು ನಿಲ್ಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ಬಸ್‌ಗಳನ್ನು ಖರೀದಿಸಿರಲಿಲ್ಲ. ಆದರೆ, 2023 (ಮೇ) ರಿಂದ 2025ರವರೆಗೆ ಸುಮಾರು 1288 ಬಸ್ಸುಗಳನ್ನು ಖರೀದಿಸಲಾಗಿದೆ.<br>ಅಲ್ಲದೇ, ಪ್ರಸ್ತುತ 2025-26ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಸಾರಿಗೆ ನಿಗಮಗಳಿಗೆ 2000 ಡೀಸಲ್ ಬಸ್ಸುಗಳನ್ನು ಖರೀದಿಸಲು ಯೋಜಿಸಲಾಗಿದ್ದು, ಅದರಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 900 ಬಸ್ಸುಗಳನ್ನು ಖರೀದಿಸಲು ಅನುಮೋದನೆ ನೀಡಲಾಗಿದೆ. ಸದರಿ ಬಸ್ಸುಗಳನ್ನು ಖರೀದಿಸಲು ಅವಶ್ಯವಿರುವ ಅನುದಾನದ ಪ್ರಸ್ತಾವನೆಯು ಪ್ರಸ್ತುತ ಪರಿಶೀಲನೆಯಲ್ಲಿದ್ದು, ಅನುದಾನ ದೊರೆತ ನಂತರ ಅವಶ್ಯಕತೆ/ಬೇಡಿಕೆಗನುಗುಣವಾಗಿ ಬಸ್‌ಗಳನ್ನು ಒದಗಿಸಲು ಆದ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.<br>ಮುಂದುವರೆದು ಈವರೆಗೆ ಒಟ್ಟು 15 ಹೊಸ ಬಸ್‌ಗಳನ್ನು ಚಿಕ್ಕಮಗಳೂರು ಘಟಕಕ್ಕೆ ನೀಡಲಾಗಿದ್ದು, 26 ಹಳೆ ಬಸ್‌ಗಳ ಕವಚಗಳನ್ನು ಪುನಶ್ಚೇತನಗೊಳಿಸಿ ಒದಗಿಸಲಾಗಿದೆ. ಸದರಿ ಘಟಕದಲ್ಲಿ ಪ್ರಸ್ತುತ 152 ವಾಹನಗಳನ್ನು 142 ಅನುಸೂಚಿಗಳಿಂದ ಕಾರ್ಯಾಚರಣೆ ಮಾಡುತ್ತಿದ್ದು ಪ್ರಸ್ತುತ 10 ಹೆಚ್ಚುವರಿ (7.04% ರಷ್ಟು) ಬಸ್ಸುಗಳಿರುತ್ತವೆ.<br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 07 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರಲಿಲ್ಲ. |
| ಆ. | ಬಂದಿದ್ದಲ್ಲಿ ಕಳೆದ ಒಂದು ವರ್ಷದಲ್ಲಿ ಚಿಕ್ಕಮಗಳೂರು ಡಿಪೋದಲ್ಲಿ ಪ್ರತಿನಿತ್ಯ ಎಷ್ಟು ಬಸ್‌ಗಳು ಕೆಟ್ಟು ನಿಂತಿರುವ ಬಗ್ಗೆ ವರದಿಗಳಾಗಿವೆ;(ವಿವರ ಒದಗಿಸುವುದು) | |
| ಇ. | ಚಿಕ್ಕಮಗಳೂರು ಘಟಕದಲ್ಲಿ ಮೆಕ್ಯಾನಿಕ್‌ಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಚಿಕ್ಕಮಗಳೂರು ಘಟಕಕ್ಕೆ ಮಂಜೂರಾಗಿರುವ ಮೆಕ್ಯಾನಿಕ್‌ಗಳ ಹುದ್ದೆಗಳೆಷ್ಟು; ಭರ್ತಿಯಾಗಿರುವ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು; | |
| ಈ. | ಬಹಳಷ್ಟು ಹಳೆಯ ಬಸ್‌ಗಳಿರುವುದರಿಂದ ಹಾಗೂ ಮೆಕ್ಯಾನಿಕ್ ಹುದ್ದೆಗಳು ಖಾಲಿ ಇರುವುದರಿಂದ ಸಕಾಲಕ್ಕೆ ಬಸ್‌ಗಳನ್ನು ದುರಸ್ತಿಪಡಿಸಲಾಗದೆ ಕೆಲವೊಂದು ಬಸ್ ಮಾರ್ಗಗಳನ್ನೆ ರದ್ದುಪಡಿಸುತ್ತಿರುವುದು ಸುಸ್ಥಿತಿಯಲ್ಲಿ ಉಕ್ಕದ ಬಸ್‌ಗಳನ್ನು ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: | |
| ಉ. | ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ಒದಗಿಸುವುದು) | |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಪ್ರಸ್ತುತ, ನಿಗಮದ ಚಿಕ್ಕಮಗಳೂರು ಘಟಕಕ್ಕೆ 120 ಮೆಕ್ಯಾನಿಕ್‌ಗಳ ಮಂಜೂರಾತಿಯಿದ್ದು, 45 ಹುದ್ದೆಗಳು ಭರ್ತಿಯಾಗಿರುತ್ತವೆ ಹಾಗೂ 75 ಹುದ್ದೆಗಳು ಖಾಲಿಯಿದ್ದು, ಸದರಿ ಹುದ್ದೆಗಳೆದುರು 22 ತಾಂತ್ರಿಕ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಚಿಕ್ಕಮಗಳೂರು ಘಟಕಕ್ಕೆ ಒದಗಿಸುವ ಮೂಲಕ ನಿಗದಿತ ಸಮಯಕ್ಕೆ ಬಸ್ಸುಗಳನ್ನು ನಿರ್ವಹಣೆ ಮತ್ತು ದುರಸ್ಥಿಮಾಡಿಸಿ ಕಾರ್ಯಾಚರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಎಲ್ಲ ಬಸ್ಸುಗಳು ಸುಸ್ಥಿತಿಯಲ್ಲಿರುತ್ತವೆ.<br><br>ಮುಂದುವರೆದು, ಚಿಕ್ಕಮಗಳೂರು ಘಟಕಕ್ಕೆ ಹೊಸ ಬಸ್‌ಗಳನ್ನು ಸೇರ್ಪಡೆಗೊಳಿಸುವ ಹಾಗೂ ಖಾಲಿ ಇರುವ ತಾಂತ್ರಿಕ ಹುದ್ದೆಗಳ ನೇಮಕಾತಿಗೊಳಿಸುವ ಬಗ್ಗೆ ಪರಿಶೀಲಿಸಲಾಗುತ್ತಿದ್ದು, ಆದ್ಯತೆಯ ಮೇರೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಟಿಡಿ 256 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು